ಬರವಣಿಗೆ ಆರಂಭಿಸಿದಾಗ, ನಮ್ಮಲ್ಲಿ ಹೆಚ್ಚಿನವರು ಪರಿಚಿತ ಲಯ, ನಿರೀಕ್ಷಿತ ಪರಿಣಾಮಗಳನ್ನಿಟ್ಟು ಕೊಂಡು ಸಾಂಪ್ರದಾಯಿಕ ಶೈಲಿಗೆ ಹೆಚ್ಚು ಒಲವು ತೋರಿಸುತ್ತಿದ್ದರು. ಆದರೆ ಇಂದು? ಯುವ ಕವಿಗಳು ರೂಢ ನಿಯಮಗಳನ್ನು ಮುಲಾಜಿಲ್ಲದೆ ಮುರಿಯುತ್ತಿದ್ದಾರೆ. ಇವುಗಳಲ್ಲಿ, ಮುಷ್ತಾಕ್ ಅಹ್ಮದ್ ದಿನ್, ಟೋಕೋನ್ ಠಾಕೂರ್, ಜ್ಯುವೆಲ್ ಮೊಸ್ತಫಿಜ್, ಅನಿಫ್ ರುಬೆದ್, ಶೆಲ್ಲಿ ನಾಜ್, ರಹಿಮಾ ಅಫ್ರೋಜ್ ಮುನ್ನಿ, ಸಾಬೇರಾ ತಬಸ್ಸುಮ್, ಜಾಹಿದ್ ಸೋಹಾಗ್, ಫೈಸ್ ಮಜ್ಹೀದ್ ಮತ್ತಿತರ ಕವಿಗಳ ಹೆಸರುಗಳು ಗಮನಾರ್ಹವಾಗಿವೆ. ಅವರು ಮುಕ್ತಛಂದಸ್ಸಿನಲ್ಲಿ ಬರೆಯುತ್ತಿದ್ದಾರೆ. ಗದ್ಯವನ್ನು ಪದ್ಯದೊಂದಿಗೆ ಬೆರೆಸುತ್ತಿದ್ದಾರೆ, ಆಡುಮಾತಿನ ಲಯಕ್ಕೆ ಹತ್ತಿರವಾಗಿ ಬರೆಯುತ್ತಾರೆ. ಕೆಲವೊಮ್ಮೆ ಹಳೆಯ ಜನಪದ ಶೈಲಿಯನ್ನು ನೆನಪಿಸುತ್ತಾರೆ. ಕೆಲವೊಮ್ಮೆ ಬೀದಿ ಹೋರಾಟಗಾರರಂತೆ ಘರ್ಜಿಸುತ್ತಾರೆ. ಕಾವ್ಯ ಈಗ ದೂಳು ತುಂಬಿದ ಪುಟಗಳಿಗೆ ಸೀಮಿತವಾಗಿಲ್ಲ ಅನ್ನೋದು ನನಗೆ ಖುಷಿ ಕೊಡೋ ವಿಷಯ.

◆ **ಇತ್ತೀಚಿನ ಬಾಂಗ್ಲಾ ದೇಶದ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿ ಎಲ್ಲರ ಗಮನ ಸೆಳೆಯಿತು. ಪ್ರಸ್ತುತ ನಿಮ್ಮ ದೇಶದ ಬಲಪಂಥೀಯ ರಾಜಕಾರಣದ ಮೇಲುಗೈಯನ್ನು ಯಾವ ರೀತಿ ನೋಡುತ್ತೀರಿ? ಇಲ್ಲಿ ಯುವ ಪೀಳಿಗೆಯ ಜವಾಬ್ದಾರಿಗಳೇನು?**

ಬಂಗಾಳಿ ರಾಷ್ಟ್ರೀಯತೆಯನ್ನು ಆಧರಿಸಿದ ರಾಜಕಾರಣಕ್ಕೆ ಯುವಪೀಳಿಗೆಯನ್ನು ಪ್ರೇರೇಪಿಸಲು ಸಾಧ್ಯವಾಗಿಲ್ಲ. ನಿಖರ ರಾಜಕೀಯ ಪರಿವರ್ತನೆಯಲ್ಲಿ ತಾವು ವಹಿಸಬೇಕಾದ ಪಾತ್ರದ ಬಗ್ಗೆ ಅವರು ಸ್ವತಃ ಸಂಶಯ ಮತ್ತು ಭಿನ್ನಾಭಿಪ್ರಾಯ ಹೊಂದಿದ್ದಾರೆ. ಬಾಂಗ್ಲಾದೇಶವು ಎಂದಾದರೂ ನಿಜವಾದ ಫ್ಯಾಸಿಸಮ್ ಮುಕ್ತ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ರಾಷ್ಟ್ರವಾಗಿ ನಿಲ್ಲಲು ಸಾಧ್ಯವಾಗುತ್ತದೆಯೇ ಅನ್ನೋದೆ ಅನುಮಾನ.

ಬಾಂಗ್ಲಾದೇಶದ ಬಲಪಂಥೀಯ ರಾಜಕೀಯವನ್ನು ಯುವಪೀಳಿಗೆ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಇದು ನಮ್ಮ ದಿನನಿತ್ಯದ ಬದುಕಿಗೆ ಸಂಬಂಧಿಸಿದ್ದು. ರಾಜಕೀಯ ಅಸ್ವಸ್ಥತೆ ಎಂದರೆ ಕೇವಲ ಇತಿಹಾಸದಲ್ಲಿ ಮುಗಿದು ಹೋದ ಘಟನೆ ಅಲ್ಲ. ಇದು ಬೂದಿ ಮುಚ್ಚಿದ ಕೆಂಡದಂತೆ ಜೀವಂತವಾದ, ಯಾವ ಕ್ಷಣವೂ ಮರಳಿ ಬರಬಹುದಾದ ಬಿರುಗಾಳಿ. ಅದಕ್ಕೆ ಹತ್ತು ಹಲವು ಮುಖಗಳು. ಕೆಲವೊಮ್ಮೆ ಅದು ಧರ್ಮದ ವೇಷ ತೊಡುವುದು, ಕೆಲವೊಮ್ಮೆ ರಾಷ್ಟ್ರಭಕ್ತಿಯ ಹೆಸರಿನಲ್ಲಿ ಬರುತ್ತದೆ, ಇನ್ನೊಮ್ಮೆ 'ಸಂಸ್ಕೃತಿಯನ್ನು ರಕ್ಷಿಸುವ' ನಂಬಿಕೆಯ ಮಿತಾಯಿಯಾಗಿ ಬರುತ್ತದೆ. ಭಯ, ಆತಂಕವನ್ನು ಒಳಗಿಳಿಸಿಕೊಳ್ಳದೇ ಇದನ್ನು ಪ್ರಶ್ನಿಸಬೇಕು. ಕವಿಯಾಗಿ ನಾನು ಇದರಿಂದ ಮೌನ ಅಪಾಯಕಾರಿಯೆಂಬ ಪಾಠ ಕಲಿಯಬೇಕು. ನನ್ನ ಕವನಗಳು ಕೇವಲ ಸುಂದರವಾಗಿ ಪೋಣಿಸಿದ ಪದಗಳಾಗದೇ, ನನ್ನ ಧ್ವನಿ ಭಯದಿಂದ ನಡುಗುವಾಗಲೂ ನಾನು ಸತ್ಯ ಹೇಳಲೇಬೇಕು.

◆ **ಮುಜಿಬುರ್ ರೆಹೆಮಾನ್ ಅವರ ಸಂಘಟಿತ ಹೋರಾಟ ಮತ್ತು ತ್ಯಾಗದ ಮಹತ್ವವನ್ನು ಒಬ್ಬ ಮಹಿಳೆಯಾಗಿ ನೀವು ಹೇಗೆ ನೆನಪಿಸಿಕೊಳ್ಳಲು ಬಯಸುತ್ತೀರಿ?**

ನಾನು ಅವರನ್ನು ನೋಡಿಲ್ಲ. ಆದರೆ ನನ್ನ ಸೋದರ ಮಾವ ಅವರ ನಿಷ್ಠಾವಂತ ಅನುಯಾಯಿ ಆಗಿದ್ದರು. ನನ್ನ ಮಾವ ಕಾಣೋದಕ್ಕೆ, ಮುಜಿಬುರ್ ರೆಹಮಾನ್ ಥರವೇ ಇದ್ದರು. ಅವರ ಶೈಲಿಯಲ್ಲೇ ಕೂದಲು ಬಿಟ್ಟಿದ್ದರು ಮತ್ತು ಅವರ ಹಾಗೆ ಬಟ್ಟೆಗಳನ್ನ ಧರಿಸುತ್ತಿದ್ದರು. ವಿಶೇಷವಾಗಿ, ದೊಡ್ಡವಳಾದ ನಂತರ ಮತ್ತು ಇಂದಿಗೂ, ಈ ಕೌಟುಂಬಿಕ ಸಂಪರ್ಕವು ನನಗೆ ಅಪಾರ ಸಂತೋಷವನ್ನು ನೀಡುತ್ತದೆ. ಅವರ ಧೈರ್ಯ, ದೂರದೃಷ್ಟಿ, ತ್ಯಾಗ... ಇವೆಲ್ಲವೂ ಮರೆಯಲಾಗದವು. ಅವರ ವ್ಯಕ್ತಿತ್ವವು ಸಾಟಿಯಿಲ್ಲದ್ದು. ಅವರು ನಮ್ಮ ರಾಷ್ಟ್ರದ ಪಿತಾಮಹ ಎಂಬುದು ನನ್ನ ಹೆಮ್ಮೆ.

◆ **ಪದೇಪದೇ ನಿಮಗೆ ಬೀಳುವ ಕನಸು ಯಾವುದು?**

ಸುಂದರಬನ್ಸ್‌ನ ಮಲಂಚಾ ನದಿಯ ದಡದ ಉದ್ದಕ್ಕೆ ಒಂದು ಹಾಯಿ ದೋಣಿ ನಿಧಾನವಾಗಿ ಚಲಿಸುತ್ತದೆ. ನನ್ನದೇ ಕುಟುಂಬದ ಅನೇಕ ಜನರು ಅಲ್ಲಿರುತ್ತಾರೆ ಮತ್ತು ನಾವಿಬ್ಬರು ನದಿಯ ಎರಡು ಬದಿಗಳಲ್ಲಿ ಎದುರು ಬದುರಾಗಿ ನಿಂತಿರುತ್ತೇವೆ. ನಮ್ಮ ಕಣ್ಣು ಮತ್ತು ಹೃದಯದ ನಡುವೆ ಬಿರುಗಾಳಿ ನಿಶ್ಯಬ್ದವಾಗಿ ಬೀಸುತ್ತದೆ. ಇದು ನನಗೆ ಆಗಾಗ ಬೀಳುವ ಕನಸು. ನನಗೆದುರಾಗಿ ನದಿಯ ಆಚೆ ದಡದಲ್ಲಿ ನಿಂತಿರುವ ವ್ಯಕ್ತಿ ಬಹಳ ಪರಿಚಿತರೆನಿಸುತ್ತೆ. ಆದರೆ ಅವರ್‍ಯಾರು ಎಂದು ತಿಳಿಯುತ್ತಿಲ್ಲ. ●